**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.**

**ಸಿ.ಸಿ. ಸಂಖ್ಯೆ.262/2023**

ಸಾಕ್ಷಿದಾರರ ಹೆಸರು : ಶಿವ ಸಿ.ಡಬ್ಲ್ಯೂ: 4 ಪಿ.ಡಬ್ಲ್ಯೂ: 3

ತಂದೆಯ ಹೆಸರು : ರಂಗೇಗೌಡ

ವಯಸ್ಸು : 55 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ವಾಲೆ ಕರಟ್ಟಿ

ದಿನಾಂಕ: 12.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನ್ಯಾಯಾಲಯದ ಮುಂದಿರುವ ಆರೋಪಿಯು ನನಗೆ ಪರಿಚಯ ಇರುತ್ತಾರೆ. ಆರೋಪಿಯು ಗೋಣಿಬೀಡು ನಿವಾಸಿಯಾಗಿರುತ್ತಾರೆ. ಈಗ ನನಗೆ ತೋರಿಸಿದ ಅಮಾನತ್ತು ಮಹಜರ್ ನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಮಹಜರ್ ನ್ನು ನಿ.ಪಿ.6 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ನಿ.ಪಿ.6 ದಾಖಲೆಗೆ ನಾನು ದಿ: 17.07.2022 ರಂದು 1.00 ರಿಂದ 3.00 ಗಂಟೆಯ ಅವಧಿಯಲ್ಲಿ ಮಹಜರ್ ಕಾಲದಲ್ಲಿ ಸಹಿ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಚಾಸಾ.5 ಮತ್ತು 6 ರವರು ಹಾಜರಿದ್ದರು. ಈಗ ನನಗೆ ತೋರಿಸಿದ ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ಛಾಯಚಿತ್ರವನ್ನು ನಿ.ಪಿ.7 ಎಂದು ಗುರುತಿಸಲಾಯಿತು. ಆರೋಪಿಯ ಮೊಬೈಲ್ ಪೋನ್ ನ್ನು ಅಮಾನತ್ತು ಪಡಿಸಿಕೊಳ್ಳುವ ಕಾಲದಲ್ಲಿ ನಿ.ಪಿ.7 ಛಾಯಚಿತ್ರವನ್ನು ಪೊಲೀಸರು ನನ್ನ ಸಮಕ್ಷಮ ತೆಗೆದಿರುತ್ತಾರೆ. ಈಗ ನನಗೆ ತೋರಿಸಿದ ಸ್ಥಳ ಮಹಜರ್ ನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಮಹಜರ್ ನ್ನು ನಿ.ಪಿ.8 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.8(ಎ) ಎಂದು ಗುರುತಿಸಲಾಯಿತು. ನಿ.ಪಿ.8 ದಾಖಲೆಗೆ ಸಂಜೆ 4.00 ರಿಂದ 5.00

ಗಂಟೆ ಸಮಯದಲ್ಲಿ ದಿಃ 17.07.2022 ರಂದು ಹಾಕಿರುತ್ತೇನೆ. ನಿ.ಪಿ.8 ದಾಖಲೆಗೆ ನಾನು ಸಹಿ ಮಾಡುವ ಸಮಯದಲ್ಲಿ ಚಾಸಾ.5 ಮತ್ತು 6 ರವರು ಹಾಜರಿದ್ದರು. ಈಗ ನನಗೆ ತೋರಿಸಿದ 4 ಛಾಯಚಿತ್ರಗಳಲ್ಲಿ ನಾನು ಹಾಜರಿರುತ್ತೇನೆ. ಛಾಯಚಿತ್ರಗಳನ್ನು ನಿ.ಪಿ.9 ರಿಂದ 12 ಎಂದು ಗುರುತಿಸಲಾಯಿತು. ನಿ.ಪಿ.9 ರಿಂದ 12 ಛಾಯಚಿತ್ರಗಳನ್ನು ಆರೋಪಿಯ ಮನೆಯಲ್ಲಿ ಹಣ ಅಮಾನತ್ತು ಪಡಿಸಿಕೊಳ್ಳುವ ಸಮಯದಲ್ಲಿ ತೆಗೆದಿರುವ ಛಾಯಚಿತ್ರವಾಗಿರುತ್ತದೆ. ನಿ.ಪಿ.2 ಮಹಜರ್ ನಲ್ಲಿ ಇರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ನಿ.ಪಿ.2 ರಲ್ಲಿ ಇರುವ ಸಹಿಯನ್ನು ನಾನು ದಿಃ 30.07.2022 ರಂದು ಹಾಕಿರುತ್ತೇನೆ. ಎಷ್ಟು ಗಂಟೆಗೆ ನಿ.ಪಿ.2 ದಾಖಲೆಗೆ ನಾನು ಸಹಿ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ನಿ.ಪಿ.2 ಮಹಜರ್ ಗೆ ಸಹಿ ಮಾಡುವ ಸಮಯದಲ್ಲಿ ನನ್ನ ಜೊತೆ ಚಾಸಾ.1 ಮತ್ತು 6 ರವರು ಹಾಜರಿದ್ದರು. ನಿ.ಪಿ.3 ಮತ್ತು 4 ಛಾಯಚಿತ್ರದಲ್ಲಿ ನಾನು ಹಾಜರಿರುತ್ತೇನೆ. ನ್ಯಾಯಾಲಯದ ಆದೇಶದ ಮೇರೆಗೆ ಹಣ ಬಿಡುಗಡೆ ಮಾಡಿ ಠಾಣೆಯಿಂದ ಪಡೆಯುವ ಸಮಯದಲ್ಲಿ ನಿ.ಪಿ.3 ಮತ್ತು 4 ಛಾಯಚಿತ್ರವನ್ನು ಪೊಲೀಸರು ತೆಗೆದಿರುತ್ತಾರೆ. ಈಗ ನನಗೆ ತೋರಿಸಿದ ನೋಟೀಸುಗಳಲ್ಲಿ ಇರುವ ಸಹಿಗಳು ನನ್ನದೇ ಇರುತ್ತದೆ. ನೋಟೀಸುಗಳನ್ನು ನಿ.ಪಿ.13 ಮತ್ತು 14 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಮತ್ತು ನಿ.ಪಿ.14(ಎ) ಎಂದು ಗುರುತಿಸಲಾಯಿತು. ಶಾಲೆಯ ಅಕ್ಷರ ದಾಸೋಹದ ಹಣವನ್ನು ಆರೋಪಿಯು online ಮೂಲಕ ಆತನ ಖಾತೆಗೆ ವರ್ಗಾವಣೆ ಮಾಡಿರುತ್ತಾನೆ. ಆ ಕಾರಣದಿಂದ ಸದರಿ ಮಹಜರ್ ನ್ನು ಮಾಡಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು ಸ.ಸ.ಅ. ರವರಿಂದ</u>**

2. ನಿ.ಪಿ.6 ಮಹಜರ್ ನ್ನು ದಿಃ 17.07.2022 ರಂದು 3.00 ರಿಂದ 4.00 ಗಂಟೆ ಸಮಯದಲ್ಲಿ ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.6 ದಾಖಲೆಗೆ ನನ್ನ ಜೊತೆ ಚಾಸಾ.5 ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.8 ಮಹಜರ್ ನ್ನು ದಿಃ 17.07.2022 ರಂದು ಸಂಜೆ 4.30 ರಿಂದ 5.30 ಗಂಟೆ ವರೆಗೆ ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.8 ಮಹಜರ್ ಮಾಡುವ ಸಮಯದಲ್ಲಿ ಚಾಸಾ.5 ರವರು ನನ್ನ ಜೊತೆ ಹಾಜರಿದ್ದರು ಎಂದರೆ ಸರಿ. ದಿಃ 30.07.2022 ರಂದು ಮಾಡಿರುವ ನಿ.ಪಿ.2 ಮಹಜರ್ ನ್ನು ಮಧ್ಯಾಹ್ನ 1.00 ರಿಂದ 1.30 ಗಂಟೆ ವರೆಗೆ ಪೊಲೀಸರು ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.2 ಮಹಜರ್ ಆಗುವ ಸಮಯದಲ್ಲಿ ನನ್ನ ಜೊತೆ ಚಾಸಾ.6 ರವರು ಹಾಜರಿದ್ದರು ಎಂದರೆ ಸರಿ. ನಿ.ಪಿ.2 ಮಹಜರ್ ಮೂಲಕ ಹಣವನ್ನು ಠಾಣೆಯಿಂದ ಚಾಸಾ.2 ರವರು ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿ. ಈ ಪ್ರಕರಣದ ಎಲ್ಲಾ ವಿಚಾರವನ್ನು ಚಾಸಾ.1 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲು ಶ್ರೀ ಡಿ.ಕೆ.ಪಿ. ವಕೀಲರಿಂದ – ಆರೋಪಿತನ ಪರವಾಗಿ</u>**

3. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ಸಾಕ್ಷಿಯ ಸಹಿ

ಮಾ